ವಿಜಯವಾಣಿ
ಕನ್ನಡಿಗರ ಧ್ವನಿ

# ಜೈನ್ ವಿವಿಗೆ ಸಮಗ್ರ ಗರಿ

## ■ ಈಜು: ಅರವಿಂದ್, ಮೀನಾಕ್ಷಿ ಚಾಂಪಿಯನ್

**ಬೆಂಗಳೂರು:** ಆತಿಥೇಯ ಜೈನ್ ವಿಶ್ವವಿದ್ಯಾಲಯ ತಂಡ ಅಖಿಲ ಭಾರತ ಅಂತರ ವಿವಿ ಈಜು ಚಾಂಪಿಯನ್‌ಷಿಪ್‌ನಲ್ಲಿ ಸಮಗ್ರ ಪ್ರಶಸ್ತಿ ಗೆದ್ದುಕೊಂಡಿತು. ಕನಕಪುರದ ಜೈನ್ ವಿವಿ ಗ್ಲೋಬಲ್ ಕ್ಯಾಂಪಸ್‌ನಲ್ಲಿ ಕಳೆದ 5 ದಿನಗಳಿಂದ ನಡೆದ ಚಾಂಪಿಯನ್ ಷಿಪ್‌ನಲ್ಲಿ ಜೈನ್ ವಿವಿ 154.5 ಅಂಕ ಕಲೆಹಾಕಿ ಚಾಂಪಿಯನ್‌ಪಟ್ಟ ಅಲಂಕರಿಸಿತು. ದೆಹಲಿ ವಿಶ್ವವಿದ್ಯಾಲಯ (131ಅಂಕ) ಹಾಗೂ ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿವಿ (97) ಕ್ರಮವಾಗಿ 2ನೇ ಮತ್ತು 3ನೇ ಸ್ಥಾನಗಳಿಸಿದವು.

ವಿಟಿಯು ಹಾಗೂ ಜೈನ್ ವಿವಿ ತಂಡಗಳು ಕ್ರಮವಾಗಿ ಪುರುಷರ ಹಾಗೂ ಮಹಿಳಾ ವಿಭಾಗದಲ್ಲಿ ಚಾಂಪಿಯನ್‌ಪಟ್ಟ ಅಲಂಕರಿಸಿದವು. ಪುರುಷರ ವಿಭಾಗದಲ್ಲಿ 65 ಅಂಕ ಸಂಪಾದಿಸಿದ ವಿಟಿಯು ಮೊದಲ ಸ್ಥಾನ ಪಡೆದರೆ, 62 ಅಂಕ ಪಡೆದ ಪಂಜಾಬ್ ವಿವಿ ಹಾಗೂ 37 ಅಂಕಗಳಿಸಿದ ಗುರುನಾನಕ್ ದೇವ್ ವಿವಿ ಕ್ರಮವಾಗಿ ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದವು. ಇನ್ನು ಮಹಿಳೆಯರ ವಿಭಾಗದಲ್ಲಿ 106 ಅಂಕ ಕಲೆಹಾಕಿದ ಜೈನ್ ವಿವಿ ಚಾಂಪಿಯನ್ ಆದರೆ, 60 ಅಂಕ ಪಡೆದ ದೆಹಲಿ ವಿವಿ ಹಾಗೂ 43 ಅಂಕಗಳಿಸಿದ ರಾಜ್ಯದ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿವಿ ಕ್ರಮವಾಗಿ 2ನೇ ಮತ್ತು 3ನೇ ಸ್ಥಾನ ಗಳಿಸಿದವು.

**ಅರವಿಂದ್, ಮೀನಾಕ್ಷಿಗೆ ಪ್ರಶಸ್ತಿ:** ವಿಟಿಯುನ ಅರವಿಂದ್ ಎಂ ಹಾಗೂ ಜೈನ್ ವಿವಿಯ ಮೀನಾಕ್ಷಿ ವಿಕೆಆರ್ ಕ್ರಮವಾಗಿ ಪುರುಷರ ಹಾಗೂ ಮಹಿಳಾ ವಿಭಾಗದ ವೈಯಕ್ತಿಕ ಚಾಂಪಿಯನ್‌ಪಟ್ಟ ಅಲಂಕರಿಸಿದರು. 3 ಕೂಟ ದಾಖಲೆ ಜತೆಗೆ 10 ಪದಕ (8 ಚಿನ್ನ, 2 ಬೆಳ್ಳಿ) ಜಯಿಸಿದ ಮೀನಾಕ್ಷಿ 66 ಅಂಕ ಪಡೆದರೆ, ಅರವಿಂದ್ 45 ಅಂಕಗಳಿಸಿದರು.

**ಅಂತಿಮ ದಿನದ ಫಲಿತಾಂಶ: ಪುರುಷರು (ವಿಜೇತರು ಮಾತ್ರ): 100 ಮೀ ಫ್ರೀಸ್ಟೈಲ್:** ನೀಲ್ ಕಾಂಟ್ರ್ಯಾಕ್ಟರ್ (ಗುಜರಾತ್ ವಿವಿ, 53.56ಸೆ), **100 ಮೀ ಬ್ರೆಸ್ಟ್‌ಸ್ಟ್ರೋಕ್:** ಜಶನ್‌ದೀಪ್ ಸಿಂಗ್ (ಪಂಜಾಬ್ ವಿವಿ, 1ನಿ.05.55ಸೆ), **200 ಮೀ ಫ್ರೀ ಸ್ಟೈಲ್:** ಬಾಬ್ಬಿ ರಾಣಾ (ದೆಹಲಿ, 2ನಿ.09.02ಸೆ). **ಮಹಿಳೆಯರು (ವಿಜೇತರು): 100 ಮೀ ಫ್ರೀಸ್ಟೈಲ್:** ಮೀನಾಕ್ಷಿ ವಿಕೆಆರ್ (ಜೈನ್ ವಿವಿ, 1ನಿ.01.44ಸೆ), **100 ಮೀ ಬ್ರೆಸ್ಟ್‌ಸ್ಟ್ರೋಕ್:** ಪ್ರಿಯಾಂಕ (ದೆಹಲಿ, 1ನಿ.18.47ಸೆ), **200 ಮೀ ಫ್ರೀ ಸ್ಟೈಲ್:** ಮೀನಾಕ್ಷಿ ವಿಕೆಆರ್ (ಜೈನ್ ವಿವಿ, 2ನಿ.30.44ಸೆ).




ಸಮಗ್ರ ಚಾಂಪಿಯನ್ ಪ್ರಶಸ್ತಿ ಪಡೆದ ಆತಿಥೇಯ ಜೈನ್ ವಿವಿ ತಂಡ.